ಓ.ಎಸ್. ನಂ. 84/2013

ಪಿ.ಡಬ್ಲ್ಯು: 01(Bosalingappa)

ದಿನಾಂಕ: 25.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: ಪ್ರತಿವಾದಿ ಪರ – ಶ್ರೀ KJG ವಕೀಲರಿಂದ.

ಎಷ್ಟನೇ ಇಸವಿಯಲ್ಲಿ ನಾಯಕರ ದೊಡ್ಡ ಬೋರಯ್ಯನ ಮಕ್ಕಳು ವಿಭಾಗ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಬಹಳ ವರ್ಷದ ಹಿಂದೆ ಆಗಿರುತ್ತಾರೆ. ವಿಭಾಗವು ಸುಮಾರು 50 ವರ್ಷಗಳಿಗಿಂತ ಹಿಂದೆಯೇ ಆಗಿರಬಹುದು. ಸಾಕ್ಷಿ ಮುಂದುವರೆದು ನಾನು ಹುಟ್ಟುವ ಮೊದಲೇ ಆಗಿರುತ್ತದೆ. ಆ ಬಗ್ಗೆ ಪಾಲು ಪತ್ರ ನಾನು ಹಾಜರುಪಡಿಸಿರುವುದಿಲ್ಲ. ಸದರಿ ಪಾಲು ವಿಭಾಗದಲ್ಲಿ ಯಾವ ಜಮೀನನ್ನು ಯಾರಿಗೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾಸರ ಓಬಯ್ಯನಿಗೆ ಯಾವ ಜಮೀನುಗಳು ಪಾಲು ವಿಭಾಗದಲ್ಲಿ ಬಂದಿದೆ ಎಂಬುದರ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ದಾನಪತ್ರ ಹಾಜರುಪಡಿಸಿರುತ್ತೇನೆ. ಅದರಲ್ಲಿ ಯಾವ ಜಮೀನು ಪಾಲು ವಿಭಾಗದಲ್ಲಿ ಬಂದಿದೆ ಎಂದು ಬರೆದಿರುವುದಿಲ್ಲ ಎಂದರೆ ಅರ್ಧ ಬಂದಿದೆ ಎಂದು ಬರೆದಿರುತ್ತದೆ. ಸದರಿ ದಾನಪತ್ರ ನ್ಯಾಯಾಲಯದಲ್ಲಿ ರದ್ದುಪಡಿಸಲಾಗಿದೆ ಎಂದರೆ ಸುಳ್ಳು.

ಸದರಿ ದಾನಪತ್ರದನ್ವಯ ನಮಗೆ ಅದರಲ್ಲಿರುವ ಸರ್ವೆ ನಂಬರುಗಳಿಗೆ ಹಕ್ಕುಗಳು ಬಂದಿದೆ ಹಾಗೂ ನಾವು ಅದನ್ನು ಉಳುಮೆ ಮಾಡುತ್ತಿದ್ದೇವೆ. ದಾನಪತ್ರದನ್ವಯ ನಮಗೆ ಅದರಲ್ಲಿ ಒಳಗೊಂಡಿರುವ ಜಮೀನುಗಳಿಗೆ ಹಕ್ಕು ಲಭಿಸಿದ್ದರೆ ನಾವು ಈ ದಾವೆಯನ್ನು ಯಾವ ಕಾರಣಕ್ಕೆ ಸಲ್ಲಿಸಿರುತ್ತೇವೆ ಎಂದರೆ ಅವರು ಪಹಣಿ ಪತ್ರಿಕೆಗಳನ್ನು ಮೋಸದಿಂದ ಅವರ ಹೆಸರಿಗೆ ಮಾಡಿಕೊಂಡ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. 259/1996 ರಲ್ಲಿ ಹೂಡಿರುವ ದಾವೆಯಲ್ಲಿ ದಾನಪತ್ರದನ್ವಯ ನಮಗೆ ಹಕ್ಕು ಬಂದಿರುತ್ತದೆ. ಸದರಿ ದಾನಪತ್ರದನ್ವಯ ಹಾಗೂ ಸದರಿ ದಾವೆಯ ತೀರ್ಪಿನನ್ವಯ ನಾವು ಪಹಣಿಯನ್ನು ರದ್ದುಪಡಿಸಿಕೊಳ್ಳಬಹುದಾಗಿತ್ತು ಎಂದರೆ ಊರಿನ ಹಿರಿಯರು ರಾಜಿ ಮಾಡಿಕೊಳ್ಳಿ ಎಂದು ಹೇಳಿದ ಕಾರಣ ನಾವು ಪಹಣಿ ವಿಚಾರಕ್ಕೆ ಹೋಗಿರುವುದಿಲ್ಲ. ದಾನಪತ್ರದ ಆಧಾರದ ಮೇರೆಗೆ ಭಾಗ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತೇವೆ. ಅಸಲು ದಾವೆ 259/1996 ನಮ್ಮಂತೆ ದಾನಪತ್ರದನ್ವಯ ತೀರ್ಪು ಆಗಿರುವುದಿಲ್ಲ ಎಂದರೆ ಸುಳ್ಳು. ಸರ್ವೆ ನಂಬರ್ 210 ಎ ಕಾಡಲ ಬೋರಯ್ಯ, ಗಂಗಮ್ಮ ಮತ್ತು ಪಾಲಮ್ಮರವರ ಹೆಸರಿಗೆ ಜಂಟಿ ಪಹಣಿ ಇದೆ ಎಂದರೆ ಸುಳ್ಳು. ಸರ್ವೆ ನಂಬರ್ 163 ಬಿ, 164 ಬಿ, 181 ಡಿ, 212 ಡಿ, 213 ಇ ಕಾಡಲ ಬೋರಯ್ಯ, ಗಂಗಮ್ಮ ಮತ್ತು ಪಾಲಮ್ಮರವರ ಹೆಸರಿಗೆ ಜಂಟಿ ಪಹಣಿ ಇದೆ ಹಾಗೂ ಸಾಮೂಹಿಕ ಭಾಗ ಇದೆ ಎಂದರೆ ಸುಳ್ಳು. ಮನೆ ಸಂಖ್ಯೆ 172 ಯು ಸರ್ವೆ ನಂಬರ್ 181 ಡಿ ರಲ್ಲಿ ಇದೆ. ಸದರಿ ಸರ್ವೆ

ಓ.ಎಸ್. ನಂ. 84/2013

ಪಿ.ಡಬ್ಲ್ಯೂ: 01(Bosalingappa)

ನಂಬರುಗಳಲ್ಲಿ ಹಾಗೂ ಇತರ ಕುಟುಂಬದ ಆಸ್ತಿಗಳಲ್ಲಿ ನಾಯಕರ ದೊಡ್ಡಬೋರಯ್ಯನ ವಾರಸುದಾರರಿಗೆ ಸಮನಾದ ಹಕ್ಕು ಇದೆ ಎಂದರೆ ಸುಳ್ಳು.

ಬೋರಮ್ಮ ಗಂಡ ದಾಸರ ಓಬಯ್ಯ ಯಾವಾಗ ಮೃತಪಟ್ಟಿರುತ್ತಾರೆ ಎಂದರೆ 1994-95 ರಲ್ಲಿ ಮೃತಪಟ್ಟಿರುತ್ತಾರೆ. ಮೊದಲನೆಯ ಹೆಂಡತಿಯಾದ ಪಾಲಮ್ಮ ಗಂಡ ದಾಸರ ಓಬಯ್ಯ ಯಾವಾಗ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬೋರಮ್ಮ ಮತ್ತು ಪಾಲಮ್ಮ ಒಂದೇ ಮನೆಯಲ್ಲಿ ಒಟ್ಟಿಗೆ ಕರಡಿಹಳ್ಳಿಯಲ್ಲಿ ಮಾಳಿಗೆ ಮನೆಯಲ್ಲಿ ವಾಸವಾಗಿದ್ದರು. ಅದು ಉತ್ತರಕ್ಕೆ ಬಾಗಿಲು ಇರುವ ಮಾಳಿಗೆ ಮನೆ ಎಂದರೆ ಹೌದು. ಅದು 19*19 ಮಳ ಇತ್ತು ಎಂದರೆ ಹೌದು. ಅದನ್ನು ಈ ದಾವೆಯಲ್ಲಿ ಭಾಗಕ್ಕೆ ಸೇರಿಸಿರುವುದಿಲ್ಲ ಎಂದರೆ ಹೌದು.

ಸರ್ವೆ ನಂಬರ್ 229 ಅಂದರೆ ದಾವಾ ಆಸ್ತಿ ಐಟಂ ನಂಬರ್ 8 ಸರಕಾರದ ಜಮೀನು ಎಂದರೆ ಹೌದು. ಸಾಕ್ಷಿ ಮುಂದುವರೆದು ಅದನ್ನು ನಾವು ಬಂಗಾರಿ ಓಬಯ್ಯನ ಹೆಸರಿಗೆ ಮಾಡಿಸಿರುತ್ತೇವೆ. ಆ ರೀತಿ ಎಷ್ಟನೇ ಇಸವಿಯಲ್ಲಿ ಮಾಡಿಸಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಜಮೀನು 2 ನೇ ಪ್ರತಿವಾದಿಯ ಸ್ವಂತ ಆಸ್ತಿಯಾಗಿದ್ದು ಅದನ್ನು ಮೊದಲನೇಯ ಪ್ರತಿವಾದಿ ಮದುವೆಯಾಗಿ ಹೋದ ನಂತರ ಅವರು ಉಳುಮೆ ಮಾಡುತ್ತಿದ್ದ ಕಾರಣ ಅವರ ಹೆಸರಿಗೆ ನೀಡಿರುತ್ತಾರೆ ಎಂದರೆ ಸುಳ್ಳು. ದಾಸರ ಓಬಯ್ಯನ 2 ನೇ ಹೆಂಡತಿಯ ಮಕ್ಕಳಿಗೆ ದಾವಾ ಆಸ್ತಿಯಲ್ಲಿ ಭಾಗ ಇರುವುದಿಲ್ಲ, ಅದು ಪಿತ್ರಾರ್ಜಿತ ಆಸ್ತಿಯಾದ ಕಾರಣ ಹಾಗೂ ಮೊದಲನೆಯ ಹೆಂಡತಿ ಜೀವಂತ ಇದ್ದಾಗ 2 ನೇ ಮದುವೆಯಾದ ಕಾರಣ 2 ನೇ ಹೆಂಡತಿ ಹಾಗೂ ಮಕ್ಕಳಿಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸುಳ್ಳು.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.